**2014-15 ರ ಸಾಲಿನ ಪರಿಸರ ಮಿತ್ರ ಶಾಲಾ ಕಾರ್ಯಕ್ರಮಗಳ ಪೂರ್ವಭಾವಿ ಸಭೆ**

"ಪರಿಸರ ಮಿತ್ರ ಶಾಲೆ" ಯ ಪರಿಕಲ್ಪನೆಯು ಕರ್ನಾಟಕ ರಾಜ್ಯ ಮಾಲಿನ್ಯ ಮಂಡಳಿಯ ಮಹತ್ವದ ಕಾರ್ಯಕ್ರಮಗಳಲ್ಲಿ ಒಂದು. ಶಾಲಾ ಮಕ್ಕಳಲ್ಲಿ 6 ವಿಷಯಗಳಾದ ಜಲ, ವಾಯು,ಶಕ್ತಿ, ಮಣ್ಣು, ಆರೋಗ್ಯ ಮತ್ತು ನೈರ್ಮಲ್ಯ ಮತ್ತು ಶಾಲೆಯ ಸುತ್ತ ಮುತ್ತಲಿನ ಪರಿಸರದ ಬಗ್ಗೆ ಅರಿವು ಮೂಡಿಸುವುದು ಈ ಕಾರ್ಯಕ್ರಮಗಳ ಉದ್ದೇಶ.

ಕಳೆದ ಸಾಲಿನಲ್ಲಿ, ಈ ಕಾರ್ಯಕ್ರಮದಲ್ಲಿ 28 ಜಿಲ್ಲೆಗಳು ಭಾಗವಹಿಸಿದ್ದು ( ಉಡುಪಿ ಮತ್ತು ಮಂಗಳೂರು ಹೊರತು ಪಡಿಸಿ) ಪ್ರತಿ ಜಿಲ್ಲೆಯಲ್ಲಿ 21 ಪರಿಸರ ಸ್ನೇಹಿ ಶಾಲೆಗಳನ್ನು ಆಯ್ಕೆ ಮಾಡಿ ಪ್ರಶಸ್ತಿ ನೀಡಲಾಗಿದೆ. (ಮೈಸೂರು ಮತ್ತು ಮಂಡ್ಯಗಳಲ್ಲಿ ಸದ್ಯದಲ್ಲೇ ಪ್ರಶಸ್ತಿ ವಿತರಿಸಲಾಗುವುದು.)

ಮೊದಲನೇ ಬಹುಮಾನವಾಗಿ ಪ್ರಥಮ ಶಾಲೆಗೆ 'ಪರಿಸರ ಮಿತ್ರ ಶಾಲೆ'ಯೆಂದು, ಎರಡನೇ ಬಹುಮಾನವಾಗಿ 10 ಶಾಲೆಗಳನ್ನು ಹಸಿರು ಶಾಲೆಯೆಂದು, ಮೂರನೇ ಬಹುಮಾನವಾಗಿ 10 ಶಾಲೆಗಳನ್ನು ಹಳದಿ ಶಾಲೆಯೆಂದು ಘೋಷಿಸಿ ನಗದು ಬಹುಮಾನ, ಪಾರಿತೋಷಕ ಮತ್ತು ಪ್ರಮಾಣ ಪತ್ರಗಳನ್ನು ನೀಡಲಾಯಿತು. ಭಾಗವಹಿಸಿದ ಇತರ ಶಾಲೆಗಳನ್ನು "ಕಿತ್ತಳೆ ಶಾಲೆ"ಯೆಂದೂ ಘೋಷಿಸಿ, ಪ್ರಮಾಣ ಪತ್ರವನ್ನೂ ನೀಡಲಾಯಿತು.( ಮೈಸೂರು ವಲಯದ ಶಾಲೆಗೆ ಸದ್ಯದಲ್ಲೇ ಪ್ರಶಸ್ತಿ ನೀಡಲಾಗುವುದು.)

ಅಷ್ಟಲ್ಲದೇ ರಾಜ್ಯದ ವಿವಿಧ ವಲಯಗಳಿಂದ ಆಯ್ಕೆಯಾಗುವ ಆರು ಶಾಲೆಗಳನ್ನು ಅತ್ಯುತ್ತಮ ಪರಿಸರ ಮಿತ್ರ ಶಾಲೆಯೆಂದು ಘೋಷಿಸಿ, ಪ್ರಮಾಣಪತ್ರವನ್ನು ನೀಡಲಾಯಿತು.

ಈ ಕಾರ್ಯಕ್ರಮದ ವ್ಯಾಪ್ತಿಯು ಪ್ರಶಂಸಾರ್ಹವಾಗಿದ್ದು, ಇದರಲ್ಲಿ 28 ಜಿಲ್ಲೆಗಳ ಒಟ್ಟೂ 6417 ಶಾಲೆಗಳು ಭಾಗವಹಿಸಿದ್ದವು. 3,20,850 ಶಾಲಾ ಮಕ್ಕಳನ್ನು ಹಸಿರು ಯೋಧರನ್ನಾಗಿ ಮಾಡಿರುವುದೇ ಈ ಕಾರ್ಯಕ್ರಮದ ಯಶಸ್ಸು.

ಈ "ಪರಿಸರ ಮಿತ್ರಶಾಲೆ" ಕಾರ್ಯಕ್ರಮವನ್ನು 2014-15 ರ ಸಾಲಿನ ವರ್ಷದಲ್ಲೂ ಪರಿಣಾಮಕಾರಿಯಾಗಿ ನಡೆಸುವ ದೃಷ್ಟಿಯಿಂದ ತಜ್ಞರ, ಶಿಕ್ಷಣ ಇಲಾಖೆ ಮತ್ತು ಮಂಡಳಿ ಅಧಿಕಾರಿಗಳ ಸಭೆಯೊಂದನ್ನು ಕರಾಮಾನಿ ಮಂಡಳಿಯ ಕೇಂದ್ರ ಕಛೇರಿಯಲ್ಲಿ ಮಂಡಳಿಯ ಅಧ್ಯಕ್ಷರಾದ ಡಾ|| ವಾಮನ್ ಆಚಾರ್ಯ ಅವರ ಅಧ್ಯಕ್ಷತೆಯಲ್ಲಿ ಇದೇ ಮೇ. 13/2014 ರಂದು ಆಯೋಜಿಸಲಾಗಿತ್ತು.

ಈ ಸಂದರ್ಭದಲ್ಲಿ ಸದಸ್ಯ ಕಾರ್ಯದರ್ಶಿಗಳಾದ ಶ್ರೀ. ವಿಜಯ್ ಕುಮಾರ್ ಅವರು ಉಪಸ್ಥಿತರಿದ್ದರು. ಜಿಲ್ಲಾ ವಿಜ್ಞಾನ ಕೇಂದ್ರಗಳ ಮುಖ್ಯಸ್ಥರನ್ನು, ಪತ್ರಕರ್ತರಾದ ನಾಗೇಶ್ ಹೆಗಡೆ ಹಾಗೂ ಪರಿಸರ ಅಧ್ಯಯನ ಕೇಂದ್ರ. ಸಂತೇಕಡೂರು ಇದರ ನಿರ್ದೇಶಕರಾದ ಶ್ರೀ ಜನಾರ್ದನ್ ಅವರನ್ನು ಸಭೆಗೆ ಆಹ್ವಾನಿಸಲಾಗಿತ್ತು. ಶಿಕ್ಷಣ ವಿಭಾಗದ ಪ್ರತಿನಿಧಿಯಾಗಿ ಜೆಡಿಪಿಐ ಶ್ರೀ. ಮಲ್ಲಣ್ಣ ಅವರೂ ಸಭೆಯಲ್ಲಿ ಭಾಗವಹಿಸಿದ್ದರು.

ಪರಿಸರ ಮಿತ್ರ ಯೋಜನೆಯನ್ನು ಇನ್ನೂ ಹೆಚ್ಚು ಪರಿಣಾಮಕಾರಿಯಾಗಿ ಮಾಡುವುದು ಹಾಗೂ ಸುಮಾರು 10,000 ಸರ್ಕಾರಿ ಶಾಲೆಗಳು ಪಾಲ್ಗೊಳ್ಳುವಂತೆ ಮಾಡುವುದು ಈ ಸಾಲಿನ ಪರಿಸರ ಮಿತ್ರ ಯೋಜನೆಯ ಮುಖ್ಯ ಧ್ಯೇಯ.